ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಮಾನ್ಯ ವಿಧಾನ ಪರಿಷತ್ ಸದಸ್ಯರಿಗೆ ಆಪ್ತ ಸಹಾಯಕರುಗಳನ್ನು ಒದಗಿಸುವ ನಿಯಮಗಳ ಕುರಿತು

ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-

801 (887) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಸ್ತುತ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಿಗೆ ಒದಗಿಸುತ್ತಿರುವ ಎರಡು ಆಪ್ತ ಸಹಾಯಕರ ಹುದ್ದೆಗೆ ಸಂಬಂಧಪಟ್ಟಂತೆ ಇರುವ ಆದೇಶ, ನಿಯಮ ಹಾಗೂ ಮಾನದಂಡಗಳ ಪ್ರತಿ ಒದಗಿಸುವುದು;

(ಆ) ಸದಸ್ಯರು ಆಯ್ಕೆ ಮಾಡಿಕೊಂಡಿರುವ ನೋಡಲ್ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ನೋಡಲ್ ತಾಲ್ಲೂಕಿನ ತಹಶೀಲ್ದಾರರು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಿಗೆ ಆಪ್ತ ಸಹಾಯಕರನ್ನು ಒದಗಿಸುವ ಕುರಿತು ಮಾನ್ಯ ಸದಸ್ಯರಿಂದ ಮನವಿ ಸ್ವೀಕೃತವಾದ ನಂತರ ಕೈಗೊಳ್ಳಬೇಕಾದ ಕ್ರಮಗಳೇನು;

(ಇ) ಜಿಲ್ಲಾಧಿಕಾರಿಗಳು ಆದೇಶ ಮಾಡುವ ಆಪ್ತ ಸಹಾಯಕರಿಗೆ ಯಾವ ಲೆಕ್ಕ ಶೀರ್ಷಿಕೆಯಲ್ಲಿ ವೇತನ ಪಾವತಿಸಲಾಗುವುದು ಹಾಗೂ ಹೊರಗುತ್ತಿಗೆ ನೌಕರರನ್ನು ಆಪ್ತ ಸಹಾಯಕರನ್ನಾಗಿ ನೇಮಿಸದಂತೆ ಸದಸ್ಯರು ಕೋರಿದಾಗ ಆ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಸಮನಾಂತರ ಹುದ್ದೆ ಖಾಲಿ ಇರಬೇಕು ಎಂಬ ನಿಯಮವೇನಾದರು ಇದೆಯೇ?